1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

ವಿಶೇಷ ಮೊಕದ್ದಮೆ ಸಂಖ್ಯೆಃ- 997/2021

**ಪ್ರಾಸಾಃ- 1 ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 1.7.2025**

**ಮುಂದುವರೆದ ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

1 ನೇ ಆರೋಪಿಯು ನನಗೆ ಮಾದಿಗ ಸೂಳೆ ಮಗನೇ ಮತ್ತೊಮ್ಮೆ ಹೊಲಕ್ಕೆ ಬಂದಲ್ಲಿ ಕೊಲೆ ಮಾಡುತ್ತೇನೆ ಎಂದು ಬೆದರಿಸಿದ್ದನು. ತಹಸೀಲ್ದಾರ್ ರವರ ಕೇಸು ವಾಪಾಸ್ಸು ತೆಗೆದುಕೊಳ್ಳದೇ ಇದ್ದಲ್ಲಿ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದನು. ಉಳಿದ ಆರೋಪಿತರು ನನಗೆ ಬೆದರಿಕೆ ಹಾಕಿದ್ದರು. ಆರೋಪಿ 1 ಮತ್ತು 2 ರವರು ನನ್ನ ಕೈಯನ್ನು ಹಿಡಿದುಕೊಂಡರು. 1 ನೇ ಆರೋಪಿಯ 5 ನೇ ಆರೋಪಿಗೆ ನಿಮ್ಮ ಜನಾಂಗದವರನ್ನು ನೀನೇ ಕಡಿ ಎಂದು ಹೇಳಿದ್ದರು ಮತ್ತು ನಮ್ಮ ಮೇಲೆ ಆದರೆ ಕೇಸು ಆಗುತ್ತದೆ ಎಂದು ಹೇಳಿದ್ದರು. ನನಗೆ 5 ನೇ ಆರೋಪಿ ಕೊಡಲಿಯಿಂದ ತಲೆಗೆ ಹೊಡೆದನು ಮತ್ತು ಕೊಡಲಿ ತಿರುಗಿಸಿ ಎಡ ಕೈಗೆ ಹೊಡೆದನು. ಆರೋಪಿ 7 ರಿಂದ 9 ರವರು ನನ್ನ ಹೆಂಡತಿ ಚಾಸಾ 4 ಇವಳಿಗೆ ಕುಡುಗೋಲಿನಿಂದ ತಲೆಗೆ ಹೊಡೆದರು. ಆರೋಪಿ 7 ರಿಂದ 9 ರವರು ನನ್ನ ಇಬ್ಬರು ಮಕ್ಕಳಿಗೆ ಕುಡುಗೋಲು ಮತ್ತು ಕಲ್ಲಿನಿಂದ ಹೊಡೆದರು. ಆರೋಪಿ 9 ನನ್ನ ಮಗ ಶಿವಶಂಕರ್ ನಿಗೆ ಕಲ್ಲಿನಿಂದ ತಲೆಗೆ ಹೊಡೆದರು. ಗಾಯಗೊಂಡಿದ್ದ ನನ್ನನ್ನು ಮತ್ತು ನನ್ನ ಹೆಂಡತಿಯನ್ನು ನನ್ನ ಭಾಮೈದ ಚಾಸಾ 5 ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋದನು. ನಾನು ಅಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾಗ ಪೋಲೀಸರು ಅಲ್ಲಿಗೆ ಬಂದರು. ಪೋಲೀಸರ ಮುಂದೆ ನಾನು ದೂರನ್ನು ಚಾಸಾ 9 ರವರಿಗೆ ಹೇಳಿ ಬರೆಸಿ ಕೊಟ್ಟಿದ್ದೆ. ಸದರಿ ದೂರನ್ನು ನೋಡುತ್ತಿದ್ದು ಅದನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಂತರ ಪೋಲೀಸರು ನನಗೆ ನೋಟೀಸ್ ನೀಡಿ ಘಟನೆ ಸ್ಥಳಕ್ಕೆ ಪಂಚನಾಮೆ ಮಾಡಲು ಬಂದಿದ್ದರು. ಪೋಲೀಸರು ಘಟನೆ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ ಒಂದು ಕೊಡಲಿ, ಒಂದು ಕುಡುಗೋಲು, ಒಂದು ಕಲ್ಲು, ಒಂದು ಅಂಗಿ ಮತ್ತು ಒಂದು ಲುಂಗಿಯನ್ನು ಜಪ್ತು ಮಾಡಿಕೊಂಡಿದ್ದರು. ಅಂಗಿ ಮತ್ತು ಲುಂಗಿ ರಕ್ತ ಆಗಿತ್ತು. ಸದರಿ ವಸ್ತುಗಳನ್ನು ನಾನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ.

(ಈ ಹಂತದಲ್ಲಿ ಸೀಲ್ ಮಾಡಿದ ವಸ್ತುಗಳನ್ನು ತೆರೆದು ನೋಡಲು ವಿಶೇಷ ಅಭಿಯೋಜಕರು ಅನುಮತಿ ಕೋರಿದ ಮೇರೆಗೆ ಅನುಮತಿಸಲಾಯಿತು).

ಸಾಕ್ಷಿಯು ಗುರುತಿಸಿದ ಕೊಡಲಿಯನ್ನು ಮು ಮಾ 1 ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಎರಡು ಕುಡುಗೋಲನ್ನು ಮು ಮಾ 2 ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಕಲ್ಲನ್ನು ಮು ಮಾ 3 ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಅಂಗಿಯನ್ನು ಮು ಮಾ 4 ಎಂದು ಮತ್ತು ಲುಂಗಿಯನ್ನು ಮು ಮಾ 5 ಎಂದು ಗುರುತಿಸಲಾಯಿತು. ನಾನು ಈಗ ನೋಡುತ್ತಿರುವ ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಪಂಚನಾಮೆಯನ್ನು ನಿಪಿ-2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ಚಾಸಾ 2 ಮತ್ತು 3 ರವರು ಹಾಜರು ಇದ್ದರು. ಪಂಚನಾಮೆಯನ್ನು ಮುಂಜಾನೆ 10-00 ಗಂಟೆ ಸಮಯದಲ್ಲಿ ಮಾಡಿದ್ದರು. ಪಂಚನಾಮೆಯನ್ನು ಸರ್ವೆ ನಂ: 205 ಎ ಮತ್ತು ಬಿ ನಲ್ಲಿ ಮಾಡಿದ್ದರು. ಸಾಕ್ಷಿಯು ಗುರುತಿಸಿದ ನೋಟೀಸ್ ನ್ನು ನಿಪಿ-3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ನಾನು ಈಗ ನೋಡುತ್ತಿರುವ ಎರಡು ಪೋಟೋಗಳನ್ನು ತೆಗೆಸಿದ್ದರು. ಸದರಿ ಪೋಟೋಗಳನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು. ನನ್ನ ಜಮೀನಿನ ಪಹಣಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸರ್ವೆ ನಂ: 205 ಎ ಮತ್ತು ಬಿ ಪಹಣಿಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ-6 ಮತ್ತು 7 ಎಂದು ಗುರುತಿಸಲಾಯಿತು. ಪೋಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು: ಆರೋಪಿತರ ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದ:</u>**

ನನ್ನ ಮತ್ತು ಆರೋಪಿತರ ನಡುವೆ ಜಮೀನಿನ ಬಗ್ಗೆ ಸಿವಿಲ್ ವ್ಯಾಜ್ಯ ನಡೆಯುತ್ತಿದೆ ಎಂದರೆ ಸರಿ. ಸದರಿ ಸಿವಿಲ್ ದಾವೆಯು 2016 ರಿಂದ ಇದುವರೆಗೂ ನಡೆಯುತ್ತಿದೆ ಎಂದರೆ ಸರಿ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸರಿ. ನಿಪಿ-1 ದೂರಿನಲ್ಲಿ ಮತ್ತು ನಿಪಿ-2 ಪಂಚನಾಮೆಯಲ್ಲಿ ಪೋಲೀಸರು ಏನೇನು ಬರೆದುಕೊಂಡಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಈ ಕೇಸಿನಲ್ಲಿ ಇರುವಂತಹ ಸಾಕ್ಷಿದಾರರುಗಳು ನನ್ನ ಸಂಬಂಧಿಕರು ಮತ್ತು ಕುಲಸ್ಥರು ಎಂದರೆ ಸರಿ. ನಿಪಿ-4 ಮತ್ತು 5 ಪೋಟೋಗಳನ್ನು ನಾನು ಆಸ್ಪತ್ರೆಗೆ ಹೋಗಿ ಬಂದ ನಂತರ ಪೋಲೀಸರು ತೆಗೆಸಿದ್ದರು. ನಿಪಿ-4 ಮತ್ತು 5 ಪೋಟೋಗಳಲ್ಲಿ ನನ್ನ ಹೆಂಡತಿಗೆ,

ನನಗೆ ಮತ್ತು ನನ್ನ ಮಕ್ಕಳಿಗೆ ತಲೆಗೆ ಗಾಯ ಆಗಿರುವುದು ಕಂಡು ಬರುತ್ತಿಲ್ಲ ಎಂದರೆ ಸರಿ. ಸಾಕ್ಷಿಯು ಆಸ್ಪತ್ರೆಗೆ ತೋರಿಸಿಕೊಂಡು ಬಂದಿದ್ದೆವು ಎಂದು ಹೇಳಿದ್ದಾರೆ. ಸಾಮಾನ್ಯವಾಗಿ ಮು ಮಾ 1 ಮತ್ತು 2 ರಂತಹ ಕೊಡಲಿ ಮತ್ತು ಕುಡುಗೋಲುಗಳು ಎಲ್ಲಾ ರೈತರ ಮನೆಗಳಲ್ಲಿ ಸಿಗುತ್ತವೆ ಎಂದರೆ ಸರಿ. ನಿಪಿ-4 ಮತ್ತು 5 ಪೋಟೋಗಳಲ್ಲಿ ಮು ಮಾ 1 ಮತ್ತು 2 ಕಾಣುತ್ತಿಲ್ಲ ಎಂದರೆ ಸರಿ. ಮು ಮಾ 1 ರಿಂದ 5 ವಸ್ತುಗಳನ್ನು ನನ್ನ ಸಮಕ್ಷಮ ಜಪ್ತು ಮಾಡಿಕೊಂಡ ಬಗ್ಗೆ ಪೋಲೀಸರು ಅವುಗಳ ಮೇಲೆ ಚೀಟಿ ಅಂಟಿಸಿ ನನ್ನ ಸಹಿಯನ್ನು ಪಡೆದುಕೊಂಡಿಲ್ಲ. ನನ್ನ ಜಮೀನು ನೀರಾವರಿ ಜಮೀನು ಆಗಿರುವುದರಿಂದ ನಾನು ಸಾಮಾನ್ಯವಾಗಿ ತುಂಗಭದ್ರಾ ನದಿಯ ಕಾಲುವೆ ನೀರಿನಿಂದ ಭತ್ತ ಬೆಳೆಯುತ್ತೇನೆ ಎಂದರೆ ಸರಿ. ಸಿರುಗುಪ್ಪ ತಾಲ್ಲೂಕಿನ ಜಮೀನುಗಳಲ್ಲಿ ಸಾಮಾನ್ಯವಾಗಿ ವರ್ಷಕ್ಕೆ ಎರಡು ಬೆಳೆ ಬೆಳೆಯುತ್ತಾರೆ ಎಂದರೆ ಸರಿ. ಮೇ ತಿಂಗಳಿನಲ್ಲಿ ಭಿತ್ತನೆ ಆಗುತ್ತದೆ ಎಂದರೆ ಸರಿ. ಆಗಸ್ಟ್ ತಿಂಗಳಲ್ಲಿ ನಾನು ದೂರು ಕೊಟ್ಟಿದ್ದೆ. ನಿಪಿ-4 ಮತ್ತು 5 ಪೋಟೋಗಳಲ್ಲಿ ಜಮೀನುಗಳಲ್ಲಿ ಟ್ರಿಲ್ಲರ್ ಹೊಡೆದ ಬಗ್ಗೆ ಮತ್ತು ಭತ್ತದ ಬೆಳೆ ನಾಟಿ ಮಾಡಿದ್ದ ಬಗ್ಗೆ ಕಾಣುತ್ತಿಲ್ಲ ಎಂದರೆ ಸರಿ. ನನ್ನ ದೂರಿನಲ್ಲಿ ಟ್ರ್ಯಾಕ್ಟರ್ ನಂಬರ್, ಚಾಲಕ ಮತ್ತು ಮಾಲೀಕರ ಹೆಸರು ಬರೆಸಿಲ್ಲ ಎಂದರೆ ಸರಿ. ಊಳೂರಿನಿಂದ ಬಳ್ಳಾರಿ ಸುಮಾರು 30 ಕಿ. ಮೀ. ದೂರ ಆಗುತ್ತದೆ. ಊಳೂರಿನಿಂದ ಬಳ್ಳಾರಿ ವಿಮ್ಸ್ ಆಸ್ಪತ್ರೆಗೆ ಯಾವ ವಾಹನದಲ್ಲಿ ಬಂದೆವು ಎಂದು ದೂರಿನಲ್ಲಿ ಹೇಳಿಲ್ಲ. ಊರಿನಿಂದ ಜಮೀನು ಸುಮಾರು ಒಂದು ಕಿ. ಮೀ. ದೂರ ಆಗುತ್ತದೆ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ನನ್ನ ತಲೆಗೆ, ಎಡ ಭುಜಕ್ಕೆ, ಕಾಲಿಗೆ, ಎಡಗೈಗೆ, ಬೆನ್ನಿಗೆ ಗಾಯಗಳಾಗಿವೆ ಎಂದು ವೈದ್ಯರಿಂದ ಚಿಕಿತ್ಸೆ ಪಡೆದಿಲ್ಲ ಎಂದರೆ ಸಾಕ್ಷಿಯು ತಾನು ಆಸ್ಪತ್ರೆಗೆ ಹೋಗಿದ್ದೆ ಎಂದು ಮತ್ತು ಅಲ್ಲಿ ದಾಖಲಾಗಿದ್ದೆ ಎಂದು ಹೇಳಿದ್ದಾರೆ. ನಾನು ಒಂದು ದಿವಸ ಆಸ್ಪತ್ರೆಯಲ್ಲಿ ದಾಖಲಾಗಿದ್ದೆ. ನಾನು ಆಸ್ಪತ್ರೆಗೆ ಮುಂಜಾನೆ 11-00 ಗಂಟೆಗೆ ಹೋಗಿದ್ದೆ ಮತ್ತು ಮಾರನೇ ದಿವಸ ಮುಂಜಾನೆ ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗಿದ್ದೆ. ಮದ್ಯಾಹ್ನ ಸುಮಾರು 12-00 ಗಂಟೆಗೆ ನಾನು ಆಸ್ಪತ್ರೆಯಿಂದ ಮನೆಗೆ ಬಂದಿದ್ದೆ. ಸಾಮಾನ್ಯವಾಗಿ ವ್ಯವಸಾಯ ಮಾಡುವ ಸಮಯದಲ್ಲಿ ಮತ್ತು ಭಿತ್ತನೆ ಮಾಡುವ ಸಮಯದಲ್ಲಿ ಎಲ್ಲಾ ರೈತರು ತಮ್ಮ ತಮ್ಮ ಹೊಲಗಳಲ್ಲಿ ಇರುತ್ತಾರೆ ಎಂದರೆ ಸರಿ. ಈ ಪ್ರಕರಣದ ಸಾಕ್ಷಿದಾರರುಗಳು ನನ್ನ ಜಮೀನಿನ ಆಜು ಬಾಜುವಿನ ಜಮೀನುಗಳ ಮಾಲೀಕರಲ್ಲ ಎಂದರೆ ಸರಿ. ನಮಗೂ ಮತ್ತು 1 ರಿಂದ

4 ನೇ ಆರೋಪಿತರುಗಳ ನಡುವೆ ಸರ್ವೆ ನಂಃ 205 ಎ ಮತ್ತು 205 ಬಿ ಬಗ್ಗೆ ಸಿವಿಲ್ ದಾವೆ ನಡೆಯುತ್ತಿದೆ ಎಂದರೆ ಸರಿ. ಸದರಿ ಸಿವಿಲ್ ದಾವೆಯಲ್ಲಿ 5 ರಿಂದ 9 ನೇ ಆರೋಪಿತರು 1 ರಿಂದ 4 ನೇ ಆರೋಪಿತರಿಗೆ ಸಪೋರ್ಟ್ ಮಾಡುತ್ತಿದ್ದಾರೆ ಎಂದರೆ ಸರಿ. ಚಾಸಾ 7 ಮತ್ತು 9 ರವರು ನಮ್ಮ ಸಮುದಾಯದ ಲೀಡರ್ ಗಳಾಗಿದ್ದಾರೆ ಎಂದರೆ ಸರಿಯಲ್ಲ. ನಾವು ಆರೋಪಿತರ ವಿರುದ್ದ ಜಾತಿ ನಿಂದನೆ ಪ್ರಕರಣ ದಾಖಲಿಸಿದ್ದಲ್ಲಿ 1 ರಿಂದ 4 ನೇ ಆರೋಪಿತರು ನಮಗೆ ಭಯದಿಂದ ಜಮೀನನ್ನು ಬಿಟ್ಟು ಕೊಡುತ್ತಾರೆ ಎಂಬ ಕಾರಣದಿಂದಾಗಿ ಆರೋಪಿತರ ವಿರುದ್ದ ನಾನು ಅವರನ್ನು ಭಯ ಬೀಳಿಸುವ ಉದ್ದೇಶದಿಂದ ಸುಳ್ಳು ಜಾತಿ ನಿಂದನೆ ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಚಾಸಾ 7 ಮತ್ತು 9 ನಮ್ಮ ಊರಿನವರಲ್ಲ. ನಾನು ಚಾಸಾ 7 ಮತ್ತು 9 ರವರನ್ನು ಆಸ್ಪತ್ರೆಗೆ ದೂರು ಬರೆದು ಕೊಡಲು ಮತ್ತು ಚಿಕಿತ್ಸೆ ಕೊಡಿಸಲು ಕರೆಸಿದ್ದೆ. ನಾನು ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿದ್ದೆ. ಸರಕಾರಿ ಆಸ್ಪತ್ರೆಯಲ್ಲಿ ಯಾರೇ ಹೋದರೂ ಸಹ ಚಿಕಿತ್ಸೆ ನೀಡುತ್ತಾರೆ ಎಂದರೆ ಸರಿ. ನಾನು ನನ್ನ ಜಾತಿಯನ್ನು ದುರ್ಬಳಕೆ ಮಾಡಿಕೊಂಡು ಆರೋಪಿತರ ವಿರುದ್ದ ಸುಳ್ಳು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಆರೋಪಿತರು ಸಹ ನನಗೆ ಮತ್ತು ನನ್ನ ಹೆಂಡತಿ ಮಕ್ಕಳಿಗೆ ಕೈಯಿಂದ ಮತ್ತು ಮು ಮಾ 1 ಮತ್ತು 2 ರಿಂದ ಹೊಡೆದು ಗಾಯಗೊಳಿಸಿಲ್ಲ ಮತ್ತು ನಮಗೆ ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿಲ್ಲ ಮತ್ತು ನಮಗೆ ಜಾತಿನಿಂದನೆ ಮಾಡಿಲ್ಲ ಎಂದರೆ ಸರಿಯಲ್ಲ. ಮು ಮಾ 1 ರಿಂದ 5 ನ್ನು ನಾವು ಪೋಲೀಸರಿಗೆ ಕೊಟ್ಟ ಬಗ್ಗೆ ಪೋಲೀಸರು ಪೋಟೋಗಳನ್ನು ತೆಗೆದಿಲ್ಲ. ಈ ಪ್ರುರಕಣ ಹಾಕಿದ ನಂತರ ಸರಕಾರದಿಂದ ನನಗೆ ಮತ್ತು ನನ್ನ ಹೆಂಡತಿಗೆ ತಲಾ ರೂ. 25,000 ಹಣ ಬಂದಿತ್ತು. ನಾನು ಚಾಸಾ 7 ಮತ್ತು 9 ರವರು ಪ್ಲಾನ್ ಮಾಡಿ ಕತೆ ಕಟ್ಟಿ ಸರಕಾರದಿಂದ ಪರಿಹಾರದ ಹಣ ಪಡೆಯುವ ಸಲುವಾಗಿ ಮತ್ತು ಆರೋಪಿತರಿಂದ ಆಸ್ತಿ ಪಡೆದುಕೊಳ್ಳುವ ಸಲುವಾಗಿ ಆರೋಪಿತರ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಅದರಂತೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

ಅಪರ ಜಿಲ್ಲಾ ಮತ್ತು  ಸತ್ರ ನ್ಯಾಯಾಧೀಶರು,

ವಿಶೇಷ ನ್ಯಾಯಾಲಯ, ಬಳ್ಳಾರಿ.